# ಚಿತ್ತ ಕೆತ್ತಿದ ಚಿತ್ರ

ನೀವು ವಹಿಸಿದ ಕೊನೆಯ ಪಾತ್ರ ಮತ್ತು ನೀವು ಆ ಪಾತ್ರವಾಗಿಯೇ ಉಳಿಯಬಯಸಿದಿರಿ. ಭೂಮಿ ಲಘುವಾಗಿ ಕಂಪಿಸುತ್ತಿದ್ದ, ಗಿರಿಯಿಂದ ಪುಟ್ಟ ಬಂಡೆಗಳು ಉರುಳುತ್ತಿದ್ದ ಆ ಹಳ್ಳಿಯಲ್ಲಿ ಇರುವುದೆಂದರೆ ಏನರ್ಥ? ಪ್ರಕೃತಿ ಒಡ್ಡಬಹುದಾದ ಅನೂಹ್ಯ ಅವಘಢಗಳಿಗೆ ಎದೆಯೊಡ್ಡಿಕೊಂಡು ಇದ್ದಲ್ಲೇ ನಿಲ್ಲುವುದು, ಬಾಳುವುದು ಅಥವಾ ನಶಿಸಿಹೋಗುವುದು. ಸ್ವಲ್ಪ ಮೊದಲು ಹಳ್ಳಿ ಬಿಟ್ಟು ಹೋಗಲು ನೀವೂ ಅಣಿಯಾಗಿದ್ದವರೇ, ಕಡೆಯಲ್ಲಿ ಅದಕ್ಕಿಂತ ನಿಮ್ಮ ಪ್ರೀತಿಯ ಪರ್ಬುಗಳ ಮರುಳು ಸಾಹಸದಲ್ಲಿ ಜೊತೆಗೂಡುವುದೇ ನಿಮಗೆ ಉತ್ತಮವೆನ್ನಿಸಿತು.

'ಅನುಭವವನ್ನು ಹುಡುಕಿಕೊಂಡು ಹೊರಟವರು ಅದರ ಕರಾಳ ರಹಸ್ಯಗಳಿಗೆ ಇಷ್ಟೊಂದು ಹೆದರಿದರೆ ಹೇಗೆ?' ಎಂದು ನೀವು ಜಗನ್ನಾಥನಿಗೆ ಕೇಳಿದಿರಿ, ಅಂಥದೊಂದು ಆಯ್ಕೆಯನ್ನು ಸ್ವತಃ ಮಾಡಿಕೊಂಡಿರಿ. ನನ್ನ ಪಾಲಿಗೆ ನೀವು ಹಟ ಬಿಡದ ಸಾಹಸೀ ಮನುಷ್ಯನ ಬಾಳುವಿಕೆಯ ನಿರಂತರ ಸಂಕೇತವಾಗಿದ್ದೀರಿ. ಮನುಷ್ಯನ ಬಾಳುವೆಗೆ ಅರ್ಥವೇ ಇಲ್ಲದಿರಬಹುದು, ಆದರೆ ಅದಕ್ಕೊಂದು ಅರ್ಥವನ್ನು ತಂದುಕೊಳ್ಳಬೇಕಾಗುತ್ತದೆ ಎಂಬ ಅಸ್ತಿತ್ವವಾದಿಗಳ ನಂಬಿಕೆಗೆ ಜೀವ ಕೊಡುವಂತೆ ನೀವು ಬದುಕಲು ಅಥವಾ ಸಾಯಲು ನಿಶ್ಚಯಿಸಿದಿರಿ. ನನಗೆ ಇದೊಂದು ಮಹತ್ವದ ನಿರ್ಧಾರವಾಗಿ ಕಾಣುತ್ತದೆ. ನಿರರ್ಥಕವೆಂದರೆ ನಿರರ್ಥಕವೇ, ಆದರೂ ನಮ್ಮ ನಂಬಿಕೆಗಳನ್ನೋ, ತಿಳಿವಳಿಕೆಯನ್ನೋ ಮನಸಿನಾಳದಲ್ಲಿ ಜೋಪಾನವಾಗಿಟ್ಟುಕೊಂಡು ಬಾಳುವುದೇ (ಸಾಯುವುದೇ) ಒಳ್ಳೆಯದು ಎಂಬ ನಿಲುವಿಗೆ ನೀವು ಬಂದಿರಿ. ಇಂಥದೊಂದು ಗಟ್ಟಿ ನಿರ್ಧಾರವನ್ನು ಪ್ರಕಟಿಸಿ ಈ ನೆಲದಲ್ಲಿ ನೆಲೆಯಾಗಿ ಬಾಳಬೇಕಾದ ಮಾನವನ ಎಚ್ಚರಗೊಂಡ ಪ್ರಜ್ಞೆಯ ಒಂದು ಮಹಾನ್ ಸಂಕೇತವಾದಿರಿ. ಅದಕ್ಕಾಗಿ ನಾನು ನಿಮಗೆ ಋಣಿಯಾಗಿದ್ದೇನೆ.

**ಪೂರ್ಣಚಂದ್ರ ತೇಜಸ್ವಿ ಅವರ 'ನಿಗೂಢ ಮನುಷ್ಯರು' ಕಾದಂಬರಿಯ ಗೋಪಾಲಯ್ಯ, ಜಗನ್ನಾಥ, ರಂಗಪ್ಪ ಪಾತ್ರಗಳೊಡನೆ ಒಂದು ಮುಖಾಮುಖಿ...**

ಪಶ್ಚಿಮ ಘಟ್ಟಗಳು ದಟ್ಟವಾಗಿ ಹಬ್ಬಿರುವ ಮಲೆನಾಡಿನಲ್ಲಿ ಅಕ್ಷರಶಃ ಕಾಡಿನಲ್ಲೇ ಬಾಳಿಗೊಂದು ಆಶ್ರಯ ಕಟ್ಟಿಕೊಂಡವರು ನೀವು. ಅತ್ಯಂತ ಆಕಸ್ಮಿಕವಾಗಿ ಅಂದು ಬೆಳಿಗ್ಗೆ ಜಗನ್ನಾಥ, ರಂಗಪ್ಪರನ್ನು ಕಂಡಿರಿ. ಎಡೆಬಿಡದೆ ಸುರಿಯುತ್ತಿದ್ದ ಮಳೆಯಿಂದಾಗಿ ರಸ್ತೆಯಲ್ಲಿ ಹೂತುಹೋಗಿದ್ದ ಅವರ ಕಾರನ್ನು ಮೇಲೆತ್ತಲು ಸಾಧ್ಯವಾಗಲಿಲ್ಲ. ಅವರನ್ನು ಮಳೆ ನಿಲ್ಲುವವರೆಗೂ ನಿಮ್ಮ ಮನೆಗೇ ಬಂದು ವಿಶ್ರಮಿಸಿಕೊಳ್ಳಲು ಆಹ್ವಾನ ಇತ್ತಿರಿ. ಅದು ಆ ಹತ್ತಿರದ ಸುಮಾರು ವರ್ಷಗಳಲ್ಲೇ ಎಂದೂ ಕಂಡರಿಯದ ಮಳೆ.

ಜಗನ್ನಾಥ ಲೇಖಕನಾಗಿ ಒಂದಷ್ಟು ಹೆಸರು ಮಾಡಿದವನು. ಅವನ ಜೊತೆಗಿದ್ದ ರಂಗಪ್ಪ ಪ್ರೊಬೆಷನರಿ ಅಬಕಾರಿ ಅಧಿಕಾರಿಯಾಗಿ ನುಗಬೀಡಿನಲ್ಲಿ ಸೇವೆಯಲ್ಲಿದ್ದ. ಇಬ್ಬರಿಗೂ ತಮ್ಮ ಈ ಮೂಲ ವ್ಯಕ್ತಿತ್ವ ಮುಚ್ಚಿಟ್ಟು ಬೇರಿನ್ನೇನೋ ಹೆಸರು, ಉದ್ಯೋಗ ಹೇಳಿಕೊಂಡು ನಿಮ್ಮ ಬಳಿ ಪರಿಚಯಿಸಿಕೊಳ್ಳಲು ಅವರವೇ ಕಾರಣಗಳಿದ್ದವು. ಜಗನ್ನಾಥ ಇಂಥ ಕಾಡಿನಲ್ಲಿ ಎಲ್ಲಾದರೂ ಭೂಮಿ ಖರೀದಿಸಿ ಅನಾಮಧೇಯನಾಗಿ ಇದ್ದುಬಿಡಬೇಕೆಂಬ ಕನಸು ಹೊತ್ತವನು. ಈ ಕಾರ್ಯದಲ್ಲಿ ಗೆಳೆಯನಿಗೆ ನೆರವಾಗಲು ಬಂದವನು ರಂಗಪ್ಪ. ಈಗ ಈ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನಿಮ್ಮ ಪರಿಚಯಕ್ಕೆ ಬಂದರು. ನೀವಾದರೂ ನಿಮ್ಮನ್ನು ಇನ್ನೇನೋ ರೀತಿಯಲ್ಲೇ ಬಿಂಬಿಸಿಕೊಂಡಿರಿ. ಇವೆಲ್ಲ ಸುಳ್ಳು ಎಂದು ತಿಳಿದೂ ಮೂವರೂ ಎಷ್ಟೋ ಕಾಲ ಈ ಆಟ ಮುಂದುವರಿಸಿದಿರಿ! ನಿಮ್ಮ ತೋಟ, ಗದ್ದೆಗಳಲ್ಲಿ ಕೆಲಸ ಮಾಡುವ ಕಾಂಪ್ರ, ಮರಸರ ಮುಂತಾದವರ ಮಾತು, ನಡೆ, ನುಡಿಗಳು ಆದಿಕಾಲದ ಮಾನವರ ನೆನಪು ತರುವಷ್ಟು ಮೃಗೀಯ, ಪ್ರಾಕೃತ. ಓದುವ ನಮಗೂ ಅದೊಂದು ಕಲ್ಪನೆಗೆ ನಿಲುಕದ ಅಪರಿಚಿತ ಲೋಕ.

ಅದೊಂದು ಕ್ಷಣದಲ್ಲಿ ಎಲ್ಲರೂ ನಿಮ್ಮ ಮೂಲ